# ಸಂಸ್ಕೃತಿಯ ರಕ್ಷಕಿ ಮಹಿಳೆ

ಸೇವಂತಿ ಡಿ. ರೈ.

## ಸಂಸ್ಕೃತಿ

'ತಂದೆ ಜನ್ಮಕ್ಕೆ ಕಾರಣನಾದರೆ, ತಾಯಿ ಸಂಸ್ಕೃತಿಗೆ ಕಾರಣ' ಎಂಬ ಮಾತು ರೂಢಿಯಲ್ಲಿದೆ. ಅಂತೆಯೇ ಮಹಿಳೆಯನ್ನು ಸಂಸ್ಕೃತಿಯ ರಕ್ಷಕಿ, ಪೋಷಕಿ ಮತ್ತು ವಾಹಕಿ ಎನ್ನಲಾಗಿದೆ. ನಮ್ಮ ಸಹಸ್ರಾರು ವರ್ಷಗಳ ಇತಿಹಾಸವನ್ನು ನೋಡಿದಾಗಲೂ ಈ ಮಾತಿನಲ್ಲಿರುವ ಸತ್ಯತೆಯ ಅರಿವಾಗುತ್ತದೆ.

ಸಂಸ್ಕೃತ ಭಾಷೆಯ 'ಸಮ್ಯಕ್' ಎಂಬ ಪದದಿಂದ 'ಸಂಸ್ಕರಣ' ಎಂಬ ಪದ ಉದ್ಭವಿಸಿದೆ. ಸಂಸ್ಕರಣವಾದುದು ಎಂದರೆ ಉತ್ತಮವಾದುದು ಪವಿತ್ರವಾದುದು ಎಂದು ಅರ್ಥ. ಸಂಸ್ಕಾರದಿಂದ ಒಡಮೂಡಿದ್ದು ಸಂಸ್ಕೃತಿ. ಅಂದರೆ, ಔಚಿತ್ಯಕರವಾದುದನ್ನು, ಹಿತವಾದುದನ್ನು, ಒಳ್ಳೆಯದನ್ನು ತಂದುಕೊಳ್ಳುವ ಬಗೆ, ಹುಡುಕಾಟ, ವಿಧಾನವನ್ನೇ ನಾವು ಸಂಸ್ಕೃತಿ ಎಂದು ಕರೆಯುವುದು. ಇದು ಸಂಸ್ಕೃತಿಯ ಬಗ್ಗೆ ಡಿ.ವಿ.ಜಿ. ಅವರು ಕೊಡುವ ಸೊಗಸಾದ ನಿರೂಪಣೆ.

ಸ್ವಾಮಿ ಹರ್ಷಾನಂದರು ತಮ್ಮ 'ಪ್ರಾಚೀನ ಮತ್ತು ಮಧ್ಯಯುಗೀನ ಹಿಂದೂ ಸಂಸ್ಕೃತಿ' ಎಂಬ ಗ್ರಂಥದಲ್ಲಿ "ಒಂದು ಸಮಾಜದ ಸಂಸ್ಕೃತಿಯು ಅದನ್ನು ನಿರ್ಮಿಸಿರುವ ವ್ಯಕ್ತಿಗಳ ಸಂಸ್ಕೃತಿಯನ್ನು ಹಾಗೂ ಅವರ ನಡುವಿನ ಪರಸ್ಪರ ಸಂಬಂಧವನ್ನು ಅವಲಂಬಿಸಿದೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸಂಸ್ಕೃತಿಯ ಮೂಲ ಮೌಲ್ಯಗಳನ್ನು ಬೆಳೆಸಿ ಪೋಷಿಸುವತ್ತ ಬಹಳ ಗಮನ ಕೊಡಬೇಕಾಗಿದೆ." ಎಂದಿದ್ದಾರೆ. ಅದೇ ಗ್ರಂಥದ ಪ್ರಸ್ತಾವನೆಯಲ್ಲಿ ಸ್ವಾಮೀಜಿಯವರು "ಇತಿಹಾಸದ ಒಂದು ಸತ್ಯವೆಂದರೆ ಈ ಜಗತ್ತಿನ ಗತಿಯನ್ನು ರೂಪಿಸುವವರಲ್ಲಿ ಹೆಚ್ಚಿನವರು ಪರಿಶುದ್ಧ ಚಾರಿತ್ರ್ಯದ ಉತ್ಕೃಷ್ಟ ವ್ಯಕ್ತಿಗಳು" ಎಂದಿದ್ದಾರೆ.

## ಸಂಸ್ಕೃತಿಯ ಅರಿವು

ಚಿಂತನಶೀಲವಾದ ಮಾನವ ಮನಸ್ಸು ಸಂಗೀತ, ನೃತ್ಯ, ಶಿಲ್ಪ, ಚಿತ್ರ, ಸಾಹಿತ್ಯಗಳ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. ಪ್ರೀತಿ, ಸಹನೆ, ಪರಸ್ಪರ ವಿಶ್ವಾಸ, ಗೌರವ, ನಂಬಿಕೆ ಮೊದಲಾದ ಮಾನವೀಯ ಮೌಲ್ಯಗಳು ಉತ್ತಮ ಸಂಸ್ಕೃತಿಯಲ್ಲಿ ಸೇರಿವೆ. ಇದಕ್ಕೆ ವಿರುದ್ಧವಾದುದನ್ನು, ಕೆಟ್ಟ ಚಾಳಿ, ಅಹಂಕಾರವೂ ಸೇರಿದಂತೆ ಕೆಟ್ಟ ಸಂಸ್ಕೃತಿ ಎನ್ನಬಹುದು. ಆದುದರಿಂದ, ಅತ್ಯುತ್ತಮವಾದ ನಡವಳಿಕೆಯೇ ಸಂಸ್ಕೃತಿ ಎನ್ನಬಹುದಾಗಿದೆ. ಈ ನಡವಳಿಕೆಯನ್ನು ಕಲಿಯುವುದೇ ಬಾಲ್ಯದಲ್ಲಿ, ತಾಯಿಯ ಮಡಿಲಲ್ಲಿ.

ಭಾರತದಲ್ಲಿ ವಿವಿಧ ರೀತಿ, ನೀತಿ, ಭಾಷೆ ಧರ್ಮಗಳ ಆಚರಣೆಗಳಿದ್ದು, ಇದು ಬಹುಸಂಸ್ಕೃತಿಯ ದೇಶ ಎನಿಸಿದೆ. ನಾವೆಲ್ಲರೂ ಒಂದು ಎನ್ನುವ ಭಾರತೀಯ ಸಂಸ್ಕೃತಿ, ದೇಶ ಪ್ರೇಮ, ಸರಳತೆ, ಸ್ವಾಭಿಮಾನ, ಕಲಾಭಿಮಾನ, ಸಜ್ಜನಿಕೆ, ತ್ಯಾಗ, ಸೇವೆ, ಶೀಲ ಪೋಷಣೆ, ಸತ್ಯ, ದಾನ, ಪರೋಪಕಾರ, ಅಹಿಂಸೆ, ಸಹಿಷ್ಣುತೆ ಮುಂತಾದ ಅನೇಕ ಉತ್ತಮ ಅಂಶಗಳನ್ನು ಒಳಗೊಂಡಿದೆ. ಇಂತಹ ಭಾರತೀಯ ಸಂಸ್ಕೃತಿ ಉಳಿಯಬೇಕು, ಬೆಳೆಯಬೇಕು. ಈ ಶತಮಾನದ ಕೊಡುಗೆಗಳಾದ ಜಾಗತೀಕರಣ, ಉದಾರೀಕರಣಗಳ ಗೊಂದಲದಲ್ಲಿ ಬದುಕು ಕೃತಕವಾಗುತ್ತಿರುವುದನ್ನು ಕಾಣುತ್ತೇವೆ. ಈ ಯಾಂತ್ರಿಕ ಯುಗದಲ್ಲಿ ಶಾಂತಿಯ ಬದುಕು ಕಾಣಲು ಸ್ವಲ್ಪ ಮಟ್ಟಿಗಾದರೂ ನಮ್ಮ ಸಂಸ್ಕೃತಿಯ ಅರಿವು ಇರಬೇಕು.

## ಸಂಸ್ಕೃತಿಯ ರಕ್ಷಕಿಯಾಗಿ ಮಹಿಳೆ

ಈ ಸಹಸ್ರಾರು ವರ್ಷಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಮಹಿಳೆಯು ಬಹು ದೊಡ್ಡ ಪಾತ್ರವನ್ನೇ ನಿರ್ವಹಿಸಿದ್ದಾಳೆ. ತಾಯಿಯಾಗಿ, ಮಗಳಾಗಿ, ಪತ್ನಿಯಾಗಿ,



**ತಾಯಿ! ತಾಯಿ! ತಾಯಿ!**

**ದೇವರು ಎಲ್ಲ ಕಡೆ ಇರಲಾರನು, ಆದ್ದರಿಂದ ಅವನು ತಾಯಂದಿರನ್ನು ಸೃಷ್ಟಿಸಿದನು. – *ಯಹೂದಿ ಗಾದೆಯ ಮಾತು***

**'ಅಮ್ಮಾ' ಎನ್ನುವುದು ಚಿಕ್ಕ ಮಕ್ಕಳ ತುಟಿಗಳಲ್ಲಿ ಮತ್ತು ಹೃದಯಗಳಲ್ಲಿ ಮಾರ್ದನಿಸುವ ದೇವರ ಹೆಸರು. – *ಥ್ಯಾಕರೆ***

**ಜನಗಳು ಬಯಸುವ ಅತ್ಯಂತ ಮಧುರ ನುಡಿಗಳು – ಮನೆ ಅಮ್ಮ ಮತ್ತು *ಸ್ವರ್ಗ* ಎಂದು ನುಡಿದಾಗ ಕೇಳುವವು.**

**– *ಡಬ್ಲ್ಯು.ಜಿ. ಬ್ರೌನ್***

ಗೆಳತಿಯಾಗಿ, ಶಿಕ್ಷಕಿಯಾಗಿ ಆಕೆಯ ಪಾತ್ರ ಹಲವಾರು. ಆಕೆಯ ನಡೆನುಡಿ, ಆಕೆ ತನ್ನ ಮಕ್ಕಳಿಗೆ ತೋರಿಸಿಕೊಡುವ, ಕಲಿಸಿಕೊಡುವ ಉತ್ತಮ ಅಂಶಗಳು ಸತ್ಪ್ರಜೆಗಳನ್ನು ರೂಪಿಸುವಲ್ಲಿ ಗಮನಾರ್ಹವಾದ ಪಾತ್ರ ವಹಿಸುತ್ತವೆ. ಪುರುಷನು ದುರಾಸೆಗೊಳಗಾಗದೆ ಸರಿದಾರಿಯಲ್ಲಿ ನಡೆಯುವಂತೆ ಮಾಡುವವಳೇ ಆತನ ಪತ್ನಿ. ಆದ್ದರಿಂದ ಮೊತ್ತಮೊದಲಾಗಿ ಯಾವುದು ಸರಿ ಯಾವುದು ತಪ್ಪು ಎಂಬ ವಿವೇಕದ ಅರಿವು ಆಕೆಗಿರಬೇಕು.

ಹಂಪೆಯ ಒಂದು ಶಾಸನ ತಿಳಿಸುವಂತೆ, ಲಕ್ಷ್ಮೀಧರನೆಂಬ ಅಮಾತ್ಯನ ತಾಯಿ, ತನ್ನ ಮಗುವಿಗೆ ಹಾಲುಣಿಸುತ್ತಾ "*ಕೆರೆಯನ್ನು ಕಟ್ಟಿಸು, ಬಾವಿಯನ್ನು ತೆಗೆಯಿಸು...*" ಎಂದು ಹರಸುತ್ತಾಳೆ. ಪರೋಪಕಾರ, ಸೇವೆ, ದಾನ, ಸಜ್ಜನಿಕೆಯನ್ನು ಆ ತಾಯಿ ತನ್ನ ಮಗುವಿನಲ್ಲಿ ಬೆಳೆಸುತ್ತಾಳೆಂದು ಆ ಶಾಸನ ತಿಳಿಸುತ್ತದೆ. ಮುಂದೆ ಆ ವ್ಯಕ್ತಿಯೇ, ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಮಂತ್ರಿಯಾಗುತ್ತಾನೆ.

## ದೇಶಪ್ರೇಮದ ಆವಾಹಕಿ

ಮಕ್ಕಳಲ್ಲಿ ಚಿಕ್ಕಂದಿನಿಂದಲೆ ದೇಶಪ್ರೇಮ ಮೂಡಿಬರಲು ತಾಯಿಯೇ ಕಾರಣಳಾಗುತ್ತಾಳೆ. ದೇಶದ ಸಾಂಸ್ಕೃತಿಕ ಹಿನ್ನೆಲೆಯೊಡನೆ ದೇಶಭಕ್ತರ ಜೀವನ ಚರಿತ್ರೆಯನ್ನು ಹೇಳುತ್ತಾಳೆ. ಪನ್ನಾದಾಸಿ ಎಂಬ ಸೇವಕಿ ತನ್ನ ಮಗುವನ್ನೇ ಬಲಿಕೊಟ್ಟು ರಾಜಕುಮಾರನನ್ನು ರಕ್ಷಿಸಿ, ರಜಪೂತರ ರಾಜ್ಯವನ್ನು ಉಳಿಸಿದಳು. ಶಹೀದ್ ಭಗತ್‌ಸಿಂಗನ ರಕ್ತದ ಪ್ರತಿ ಕಣದಲ್ಲೂ ದೇಶಪ್ರೇಮವನ್ನು ತುಂಬಿ ಆತನನ್ನು ಭಾರತಮಾತೆಗೆ ಅರ್ಪಿಸಿದ್ದರ ಜೊತೆಗೆ, ಆತನು ಹುತಾತ್ಮನಾದ (ಕ್ರಿ.ಶ. ೧೯೩೧) ಬಳಿಕ, ೪೪ ವರ್ಷಗಳ ಕಾಲ, ಭಾರತೀಯರಲ್ಲಿ ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಪ್ರೇಮವನ್ನು ತುಂಬಿದಾಕೆಯೇ ಆತನ ತಾಯಿ ವಿದ್ಯಾವತೀ ದೇವಿ.

ಇಂತಹ ಅನೇಕ ಮಹಿಳೆಯರು ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ್ದಾರೆ. ಸ್ವಾತಂತ್ರ್ಯ, ಸ್ವದೇಶಾಭಿಮಾನ, ಸ್ವಾಭಿಮಾನದ ಪ್ರತೀಕರಾಗಿದ್ದ ಉಳ್ಳಾಲದ ರಾಣಿ **ಅಬ್ಬಕ್ಕದೇವಿ, ಕಿತ್ತೂರಿನ ರಾಣಿ ಚೆನ್ನಮ್ಮಾಜಿ, ಝಾನ್ಸಿ ರಾಣಿ ಲಕ್ಷ್ಮಿಬಾಯಿ** ಇವರುಗಳು ಕತ್ತಿ ಹಿಡಿದು ರಣರಂಗದಲ್ಲಿ ವಿದೇಶೀಯರ ವಿರುದ್ಧ ಹೋರಾಡಿದರೆ, ನಿಜಾಮ್‌ಶಾಹಿಯ ಹಿಡಿತದಿಂದ ಹೊರಬಂದು, ಶಿವಾಜಿಯು ಸ್ವತಂತ್ರ ರಾಜ್ಯವನ್ನು ಕಟ್ಟುವಂತೆ ಮಾಡಿದವಳು ಆತನ ತಾಯಿ **ಜೀಜಾಬಾಯಿ**. ತಂದೆಯಿಂದ ದೂರ ಇದ್ದರೂ, ಸುಖವು ಭೋಗದಲ್ಲಿಲ್ಲ, ತ್ಯಾಗದಲ್ಲಿದೆ, ಪ್ರಭುತ್ವವು ಶಾಸನದಲ್ಲಿಲ್ಲ, ಸೇವೆಯಲ್ಲಿದೆ ಎಂದು ತನ್ನ ತಾಯಿಯ ಮಡಿಲಲ್ಲಿ ಬೆಳೆಯುತ್ತಿರುವಾಗ ಕಲಿತಿದ್ದನ್ನು, ತಾನು ಛತ್ರಪತಿಯಾದ ಬಳಿಕ ಶಿವಾಜಿ ಜಾರಿಗೆ ತಂದನು. ಆತನ ರಾಜ್ಯದಲ್ಲಿ ಲಂಚ, ಭ್ರಷ್ಟಾಚಾರ ಇರಲಿಲ್ಲ. ಸೈನಿಕರು, ಶರಣಾದ ರಾಜ್ಯದ ಜನರನ್ನು ಹಿಂಸಿಸಬಾರದೆಂದು ಅವನು ಕಟ್ಟುನಿಟ್ಟಾಗಿ ಆಜ್ಞೆ ಮಾಡಿದ್ದ. ತನ್ನ ಬಾಲ್ಯದಲ್ಲಿ ತಾಯಿ ಜೀಜಾಬಾಯಿಯಿಂದ, ಪುರಾಣ ಮಹಾಕಾವ್ಯಗಳ ವಿಷಯ ತಿಳಿದುಕೊಂಡಿದ್ದು **ತನ್ನ ಧರ್ಮ, ತನ್ನ ಪ್ರಜೆ, ತನ್ನ ದೇಶ** ಎಂಬ ಅಭಿಮಾನವನ್ನು ಹೊಂದಿದ್ದ. ಶಿವಾಜಿ ಎಂದಾಗ ನೆನಪಾಗುವುದೇ ಹಾಗೆ ಶಿವಾಜಿಯನ್ನು ನಿರ್ಮಿಸಿದಂತಹ ಆತನ ತಾಯಿ ಜೀಜಾಬಾಯಿ.

## ಸತ್ಪ್ರಜಾರೂಪಕಿ

ಸತ್ಪ್ರಜೆಗಳನ್ನು ರೂಪಿಸುವಲ್ಲಿ ಮಹಿಳೆಯ ಪಾತ್ರ ಮಹತ್ವದ್ದು. ಇಂದಿಗೂ ಕುಟುಂಬದ ಹಿತರಕ್ಷಣೆಯಲ್ಲಿ ಆಕೆಯ ತ್ಯಾಗ ತುಂಬಾ ಹಿರಿದು. ಸಂಸಾರ ರಥವನ್ನು ಸುಗಮವಾಗಿ ಸಾಗಿಸುವ ಸಾರಥಿ ಆಕೆ.

ಈಗೀಗ ಹಲವಾರು ಕಾರಣಗಳಿಂದಾಗಿ ಬದುಕು ಕೃತಕವಾಗುತ್ತಿದೆ. ಹಣ ಸಂಪಾದನೆಯೇ ಮುಖ್ಯ ವಿಷಯವಾಗುತ್ತಿದೆ. ಈ ವೇಗದ ಬಾಳಿನಲ್ಲಿ ಶಾಂತಿ ನೆಮ್ಮದಿ ಕಾಣಲು ನಮ್ಮ ಸಂಸ್ಕೃತಿಯ ಅರಿವನ್ನು ಪಡೆಯಬೇಕು. ಇದು ಮಹಿಳೆಯಿಂದ ಸಾಧ್ಯ. ತನ್ನ ಸಂಸಾರದಲ್ಲಿರುವ ಮಕ್ಕಳ ಮತ್ತು ಯುವ ಜನಾಂಗದ ಹುಚ್ಚೋಟದ ಜೀವನಕ್ಕೆ ಕಡಿವಾಣ ಹಾಕಿ ಅವರಲ್ಲಿ ಸತ್ಯ, ಧರ್ಮ ಮತ್ತು ದೇಶಪ್ರೇಮವನ್ನು ಮಹಿಳೆ ರೂಪಿಸಬಲ್ಲಳು. ಯಾವ ಕೆಲಸವೇ ಆಗಲಿ ಕ್ರಮಬದ್ಧವಾಗಿ ಸಮಯಕ್ಕೆ ಸರಿಯಾಗಿ ಮಾಡಿದಲ್ಲಿ ಒತ್ತಡ ಇಲ್ಲದ ಜೀವನ ಸಾಗಿಸಬಹುದು. **"ವಿದ್ಯೆ ಮತ್ತು ಆತ್ಮಶ್ರದ್ಧೆಯ ಮೂಲಕ ಒಬ್ಬನಲ್ಲಿ ಸುಪ್ತವಾಗಿರುವ ಬ್ರಹ್ಮ ವ್ಯಕ್ತವಾಗುವುದು"** ಎಂಬ ವಿವೇಕಾನಂದರ ಮಾತನ್ನು ತಿಳಿಹೇಳಿ, ಜಡತ್ವದಿಂದ ತುಂಬಿರುವ ತನ್ನ ಸುತ್ತಮುತ್ತಲಿನವರನ್ನು ಹೊಡೆದೆಬ್ಬಿಸುವಾಕೆ ಮಹಿಳೆ.

## ರಾವಣ–ವಿಭೀಷಣರು

ಆದರೆ ನಾವಿಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಸುಸಂಸ್ಕೃತ ಕುಟುಂಬದಿಂದ ಬಂದಿರುವ ಎಷ್ಟೋ ಯುವ ಜನರು ವಾಮಮಾರ್ಗವನ್ನು ಹಿಡಿದಿರುವುದನ್ನು, ದುಷ್ಕೃತ್ಯಗಳಲ್ಲಿ ತೊಡಗಿರುವುದನ್ನು, ಕೆಲವೊಮ್ಮೆ ದೇಶದ್ರೋಹಿಗಳೇ ಆಗಿರುವುದನ್ನು ನಾವು ಕಾಣುತ್ತೇವೆ. ಮನೆಯ ವಾತಾವರಣ, ಅಪ್ಪಅಮ್ಮಂದಿರಿಂದ ದೊರಕಿದ ಪ್ರೀತಿ, ಮಾರ್ಗದರ್ಶನ ಇವೆಲ್ಲ ಒಂದೇ ರೀತಿ ಇದ್ದರೂ, ಸೋದರರಾದ ರಾವಣ ಮತ್ತು

ವಿಶ್ಲೇಷಣರಂತೆ, ಒಬ್ಬ ದುಂದು ವೆಚ್ಚ ಮಾಡುತ್ತಿರಬಹುದು, ಇನ್ನೊಬ್ಬ ಮಿತವ್ಯಯಿ ಅಥವಾ ಅಲ್ಪತೃಪ್ತನಾಗಿರಬಹುದು. ಒಬ್ಬ ಬುದ್ಧಿವಂತನಿದ್ದರೆ ಇನ್ನೊಬ್ಬ ಬುದ್ಧಿಹೀನನಾಗಿರಬಹುದು; ಒಬ್ಬ ಯೋಗಿಯಾಗಿದ್ದರೆ ಇನ್ನೊಬ್ಬ ಭೋಗಿಯಾಗಿರಬಹುದು. ಇವಕ್ಕೆಲ್ಲ, ಸಹವಾಸ ದೋಷ ಮತ್ತು ಆಯಾ ವ್ಯಕ್ತಿಯಲ್ಲಿರುವ ದುರಾಶೆ ಮತ್ತು ಆಲೋಚನೆ ಮಾಡುವ ಶಕ್ತಿ ಇಲ್ಲದಿರುವುದು ಮುಂತಾದ ಕಾರಣಗಳು ಇರುತ್ತವೆ. ಹೀಗೆ ಆಶೆ ಆಮಿಷಗಳಿಗೆ ಬಲಿಯಾಗಿ ಕೆಟ್ಟದಾರಿ ಹಿಡಿಯುವವರ ಸಂಖ್ಯೆ ಕಡಿಮೆ ಇದ್ದರೂ, ದೇಹದಲ್ಲಿರುವ ಒಂದು ಹುಣ್ಣಿನ ನೋವು ಇಡೀ ದೇಹವನ್ನೇ ಕಂಗೆಡಿಸುವಂತೆ, ಈ ದುಷ್ಟಶಕ್ತಿಗಳ ಅಲ್ಪ ಅಸ್ತಿತ್ವ ಕೂಡ ಕುಟುಂಬವನ್ನು, ದೇಶವನ್ನು ಕಂಗೆಡಿಸಬಲ್ಲ ಶಕ್ತಿಯನ್ನು ಹೊಂದಿರುತ್ತವೆ. ದುಷ್ಟ ಮಕ್ಕಳನ್ನು ಪಡೆದ ತಾಯಿ ನೊಂದು ಕೊಳ್ಳುವುದಲ್ಲದೆ ಮತ್ತೇನು ಮಾಡಬಲ್ಲಳು! ಭಕ್ತಿಯ ಮಹಿಮೆ ಅರಿತಿದ್ದರೆ, ಮಕ್ಕಳಿಗೆ ಸದ್ಬುದ್ಧಿಯನ್ನು ಕೊಡು ಎಂದು ಭಗವಂತನನ್ನು ಪ್ರಾರ್ಥಿಸುವಳು, ಅಷ್ಟೆ!

### ತಾಯಿಯ ಆರೈಕೆಯ ಚಮತ್ಕಾರ

ಒಂದೇ ಗುರುವಿನ ಶಿಷ್ಯರಾಗಿದ್ದರೂ, ಕುಂತಿಯ ಮಾರ್ಗದರ್ಶನದಲ್ಲಿ ಬೆಳೆದ ಪಾಂಡವರು ಸತ್ಪುರುಷರಾದರು. ದಾಸಿಯರ ಆರೈಕೆಯಲ್ಲಿ ಬೆಳೆದ ಗಾಂಧಾರಿಯ ಮಕ್ಕಳಾದ ಕೌರವರು ದೊಡ್ಡವರಾದ ಮೇಲೆ, ತಾಯಿಯ ಮಾತನ್ನು ಕೇಳದ ಕೆಡುಕರಾದರು. ಕೇವಲ ತಾಯಿಯ ಮಡಿಲಲ್ಲಿ ಹದಿನಾರು ವರ್ಷಗಳನ್ನು ಕಳೆದ ಗಂಗಾಪುತ್ರ ದೇವವ್ರತ, ಭೀಷ್ಮನೆನಿಸಿ ಮಹಾನ್ ವ್ಯಕ್ತಿಯಾದನು. ಹಿಂದೂ ಪುರಾಣಗಳ, ಮಹಾಕಾವ್ಯಗಳ ಅರಿವಿರುವ ಮಾತಾಪಿತರು ತಮ್ಮ ಮಕ್ಕಳಿಗೆ ಸಾಧ್ಯವಾದಷ್ಟು ಮಾರ್ಗದರ್ಶನ ಕೊಡುತ್ತಾರೆ ನಿಜ. ಆದರೆ ಎಲ್ಲಾ ಹಿರಿಯರು, ಇಂತಹ ಸದ್ಭಾವನೆ ಉಳ್ಳವರು ಎನ್ನಲು ಸಾಧ್ಯವಿಲ್ಲ. ಮಕ್ಕಳನ್ನು ತಪ್ಪುದಾರಿಗೆ ಒಯ್ಯುವ ತಂದೆತಾಯಿಯರು ಇಲ್ಲದಿಲ್ಲ.

ಸಾಮಾನ್ಯವಾಗಿ ಎಲ್ಲರೂ ತಿಳಿದಿರುವ ಒಂದು ಕಥಾ ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಬಹುದು. ಒಬ್ಬ ತಾಯಿ ತನ್ನ ಮಗ ಇತರರ ವಸ್ತುಗಳನ್ನು ಕದ್ದು ತಂದು ತನಗೆ ತೋರಿಸಿದಾಗ, ಆಕೆ ಸಂತೋಷದಿಂದ ಆತನನ್ನು ಹುರಿದುಂಬಿಸುತ್ತಾಳೆ. ಮುಂದೆ ಆತ ದೊಡ್ಡ ಕಳ್ಳನಾಗಿ, ಕೊನೆಗೆ ಹಣಕ್ಕಾಗಿ ಕೊಲೆಯನ್ನೂ ಮಾಡಿ, ಸಿಕ್ಕಿ ಬೀಳುತ್ತಾನೆ. ಆತನಿಗೆ ಗಲ್ಲು ಶಿಕ್ಷೆಯಾಗುತ್ತದೆ. ಗಲ್ಲಿಗೇರುವ ಮುನ್ನ ತನ್ನ ತಾಯಿಯನ್ನು ಕಾಣುವ ಕೊನೆಯ ಆಶೆಯನ್ನು ವ್ಯಕ್ತಪಡಿಸುತ್ತಾನೆ. ತಾಯಿ ಅಳುತ್ತಾ ಮಗನನ್ನು ನೋಡಲು ಬಂದಳು. ಮಗ ತನ್ನ ಹತ್ತಿರ ಬರಲು ಆಕೆಯನ್ನು ಕರೆದ. ಆಕೆ ತನ್ನ ಮಗನ ಬಳಿ ಹೋದಾಗ, ಆತ ಆಕೆಯ ಕಿವಿಯನ್ನು ಬಲವಾಗಿ ಕಚ್ಚಿದ. ಹಾಗೇಕೆ ಮಾಡಿದೆ ಎಂದು ಎಲ್ಲರೂ ಆತನನ್ನು ಕೇಳಿದರು. ಆಗ ಆತ ಹೇಳಿದ ಮಾತು ಎಲ್ಲರ ಕಣ್ಣು ತೆರೆಸುವಂತದ್ದು: "ನಾನು ಚಿಕ್ಕಂದಿನಲ್ಲಿ ಇತರರ ವಸ್ತುಗಳನ್ನು ಕದ್ದು ತಂದಾಗ ಈ ನನ್ನ ತಾಯಿ ನಾನು ತಪ್ಪು

**ತೊಟ್ಟಿಲ ತೂಗುವ ಕೈಯಲ್ಲಿ ಬೆಳೆಯುವುದು ಜಗತ್ತನ್ನೇ ಆಳುವ ಕೈ. – *ಡಬ್ಲ್ಯು.ಎಸ್. ರಾಸ್.***
**ವ್ಯಕ್ತಿಗಳು ಹೇಗಿರುತ್ತಾರೆಂದರೆ, ಅವರ ತಾಯಂದಿರು ರೂಪಿಸಿದ ಹಾಗಿರುತ್ತಾರೆ. – *ಎಮರ್‌ಸನ್***
**ನಿಜವಾಗಲೂ ತಾಯಿಯ ಕರ್ತವ್ಯ ಮಾಡುವ ಒಬ್ಬ ತಾಯಿಗೆ ಯಾವತ್ತೂ ವಿಶ್ರಾಮವಿರುವುದೇ ಇಲ್ಲ. – *ಬಲ್ಜಾಕ್***
**ತಾಯಿಯಿಲ್ಲದ ಮನೆ ದೇವರಿಲ್ಲದ ದೇಗುಲ. – *ಅನಾಮಿಕ***

ಕೆಲಸ ಮಾಡುತ್ತಿದ್ದೇನೆ ಎಂದು ತಿಳಿಸಿಹೇಳಲಿಲ್ಲ. ಅದಕ್ಕೆ ಬದಲಾಗಿ ನನ್ನನ್ನು ಕದಿಯಲು ಹುರಿದುಂಬಿಸಿ, ನಾನು ದೊಡ್ಡ ಕಳ್ಳನಾಗುವಂತೆ ಮಾಡಿದಳು. ಈಗ ನಾನು ಗಲ್ಲುಗಂಬಕ್ಕೆ ಹೋಗುವಾಗ ಅತ್ತು ಕರೆದರೆ ಏನು ಪ್ರಯೋಜನ? ನಾನು ಕದಿಯುವ ವಿಷಯವನ್ನು ಅವಳ ಕಿವಿಗಳಲ್ಲಿ ಕೇಳಿಯೂ ಸುಮ್ಮನಿದ್ದ ಕಾರಣ, ಈಕೆಯ ಕಿವಿಯನ್ನು ಕಚ್ಚಿದೆ, ಅಷ್ಟೆ" ಎಂದ.

### ಆದರ್ಶಮೂರ್ತಿಯಾಗಿ ಮಹಿಳೆ

ಕೆಲವೊಮ್ಮೆ ಬೇರೊಂದು ರೀತಿಯ ವೈಪರೀತ್ಯವನ್ನು ಕಾಣಬಹುದು. ಮಕ್ಕಳು ತಮ್ಮ ತಂದೆಯನ್ನೋ ತಾಯಿಯನ್ನೋ ತಮ್ಮ ಮಾದರಿ (Role model) ಯಾಗಿ ಇಟ್ಟುಕೊಳ್ಳುತ್ತಾರೆ. ತಂದೆತಾಯಂದಿರು ಒಮ್ಮತದಿಂದ ಇದ್ದರೆ ಮಾತ್ರ ಅವರ ಮಕ್ಕಳ ಜೀವನವನ್ನು ಸರಿಯಾಗಿ ರೂಪಿಸಬಹುದು. ಆದರೆ ಅವರಲ್ಲಿ ಹೊಂದಾಣಿಕೆ ಇಲ್ಲದಾಗ, ಅದು ಮಕ್ಕಳ ಮೇಲೆ ದುಷ್ಪ್ರಭಾವ ಬೀರುತ್ತದೆ. ಆ ಸಂದರ್ಭಗಳಲ್ಲಿ ತಾಯಿಯ ತಾಳ್ಮೆ, ಬುದ್ಧಿವಂತಿಕೆಗಳ ಪರೀಕ್ಷೆಯಾಗುತ್ತದೆ. ಆಗ ಮಕ್ಕಳಿಗೆ ಯಾವುದು ಸರಿ, ಯಾವುದು ತಪ್ಪು ಎಂದು ಅವಳು ತಿಳಿಸಿಹೇಳುವುದಲ್ಲದೆ, ಅವರಿಗೆ ತಮ್ಮ ಸಂಸ್ಕೃತಿಯ ಸರಿಯಾದ ಪರಿಚಯ ಮಾಡಬೇಕು. ಆಗ ಅವರಿಗೆ ತಮ್ಮ ವ್ಯಕ್ತಿತ್ವ ಮತ್ತು ಜೀವನ ಮಾರ್ಗದಲ್ಲಿನ ಸರಿತಪ್ಪುಗಳ ವಿವೇಕ ಉಂಟಾಗುತ್ತದೆ. ಅದರಿಂದ ಬದುಕಿನಲ್ಲಿ ಸರಿದಾರಿ ಕಾಣಲು ಅನುಕೂಲವಾಗುತ್ತದೆ.

**ಸಂಸ್ಕೃತಿಯ ರಕ್ಷಣೆಯ ಜವಾಬ್ದಾರಿ ಸ್ತ್ರೀಪುರುಷರಿಬ್ಬರದಾಗಿದ್ದರೂ, ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆ ಅದನ್ನು ಉಳಿಸಿ ಬೆಳೆಸುವಂತೆ ಮಾಡುವಲ್ಲಿ ಸ್ತ್ರೀಯರ ಪಾತ್ರ ಹಿರಿದು.**


**ರಾಮಕೃಷ್ಣ ಮಠ, ಮಂಗಳೂರು**

1) 11. 1. 2008 : ಶಾಲಾ ಮುಖ್ಯೋಪಾಧ್ಯಾಯರಿಗಾಗಿ ವಿಶೇಷ ಸಮಾವೇಶ: *ಬೆಳಗ್ಗೆ 8.30 ರಿಂದ ಸಂಜೆ 5 ಗಂಟೆ*

2) 12.01.2008 :ರಾಷ್ಟ್ರೀಯ ಯುವದಿನ: ಯುವ ಸಮಾವೇಶ *ಬೆಳಗ್ಗೆ 8.30 ರಿಂದ ಸಂಜೆ 3 ಗಂಟೆ*

ಭಾಷಣಕಾರರು: ಡಾ. ಗುರುರಾಜ ಕರ್ಜಗಿ; ಶ್ರೀ ಸುರೇಶ ಕುಲಕರ್ಣಿ, ಶ್ರೀ ಸೂಲಿಬೆಲೆ ಚಕ್ರವರ್ತಿ ಮುಂತಾದವರು

**ಸ್ಥಳ: ರಾಮಕೃಷ್ಣ ಮಠ, ಮಂಗಳಾದೇವಿ ರಸ್ತೆ, ಮಂಗಳೂರು – 575001; ಸಂಪರ್ಕ ಫೋನ್: 02824-2414412/ 2419097/9972526580**